ಪ್ರಕಾಶ ಏನಾದ? ಅವನೂ ಸತ್ತು ಹೋದನೇ?" ಎಂದು ಕೇಳಿದ್ದೇ ಹಾವು ತುಳಿದವರಂತೆ ಬೆಚ್ಚಿದ ವಲ್ಲಿ, "ಛೀ! ಬಿಡ್ತು ಅನ್ನಿ ಅಮ್ಮ. ಅವನು ಯಾಕೆ ಸಾಯ್ತಾನೆ? ನೂರು ವರ್ಷ ಬದುಕಲಿ" ಎಂದು ಬೆವರೊರೆಸಿಕೊಂಡಳು. ಸುಭದ್ರಮ್ಮ ಅಚ್ಚರಿಪಟ್ಟು ಪರೀಕ್ಷಣಾ ದೃಷ್ಟಿಯಿಂದ ಅವಳನ್ನು ನೋಡುತ್ತ, "ನೂರೇಕೆ ಸಾವಿರ ವರ್ಷ ಬದುಕಲಿ ಕಣೇ. ಆದರೆ ನೀನೇಕೆ ಇಷ್ಟು ಉದ್ವೇಗಕ್ಕೊಳಗಾಗ್ತಾ ಇದೀಯ? ಏನು ಮುಚ್ಚಿಡ್ತಾ ಇದ್ದಿಯಾ ಹೇಳು, ನನ್ನಾಣೆ" ಎಂದರು.

ವಲ್ಲಿ ಗಂಭೀರವಾಗಿ, "ಮುಂದಿನ ಕಥೇನೂ ಹೇಳೇ ಬಿಡ್ತೀನಿ. ಕೇಳಿ ಅಮ್ಮ. ಅದೇ... ಇಡೀ ಟೀಮು ಊಟಿಗೆ ಹೊರಟಿತ್ತು. ಒಂದು ಬಸ್ಸು, ಎರಡು ಕಾರು, ನಾಯಕಿಯರಿಗಾಗಿ ಒಂದು ಕಾರವಾನ್. ಕೊನೆಯ ಕ್ಷಣದಲ್ಲಿ ನಿರ್ದೇಶಕರಿಂದ ಫೋನ್ ಬಂತು. ಸೌದಾಮಿನಿ ವಿಶೇಷ ವ್ಯಕ್ತಿಯನ್ನು ಭೇಟಿ ಮಾಡಲು ಹೋಗಬೇಕಿತ್ತು. ಪ್ರಕಾಶನ ಕಾರು ಸಿದ್ಧವಾಗಿ ನಿಂತಿತ್ತು. ಅವಳು ನಿರ್ಲಿಪ್ತವಾಗಿ ಏರಿ ಕುಳಿತೊಡನೆ ವೇಗವಾಗಿ ಓಡಿತು. ಅನೇಕ ವರ್ಷಗಳ ಮೇಲೆ ಏಕಾಂತ ದೊರಕಿದ್ದರೂ ಪ್ರಕಾಶ ತಾರಾಮಣಿಯ ಎದುರು ಮಾತನಾಡುವ ಧೈರ್ಯ ಮಾಡಲಿಲ್ಲ. ಇಬ್ಬರ ನಡುವೆ ಹೆಪ್ಪುಗಟ್ಟಿದ ನೀರವ ಮೌನ. ಕೊನೆಗೆ ಆ ಮೌನದ ಚಿಪ್ಪೊಡೆದದ್ದು ಅವನೇ. "ಮೇಡಮ್, ಇನ್ನೂ ಎರಡು ಗಂಟೆಗಳ ಪ್ರಯಾಣವಿದೆ. ಏನಾದರೂ ತಿಂಡಿ, ಕಾಫಿ ತಂದು ಕೊಡಲೇ?" ಎಂದು ಕೇಳಿದ. ಒಮ್ಮೆಲೆ ಕನಲಿದವಳು, "ಒಂದಷ್ಟು ವಿಷ ತಂದು ಕೊಡು" ಎಂದಳು. ಬೆರಗಾದವನು ಕಾರು ನಿಲ್ಲಿಸಿ ಒಮ್ಮೆಲೆ ತಿರುಗಿದ. "ಮೇಡಮ್, ನೀವೀಗ ಖ್ಯಾತ ತಾರೆ. ಲಕ್ಷಾಂತರ ಅಭಿಮಾನಿಗಳಿದ್ದಾರೆ. ಹಾಗೆಲ್ಲ ಕೇಳಬಾರದು" ಎಂದ. ಅವಳು ಕಂಗಳಿಂದ ಧುಮುಕುತ್ತಿದ್ದ ಕಂಬನಿ ತಡೆಯುವ ಗೋಜಿಗೆ ಹೋಗದೇ, "ಬೆಂಕಿ ಬಿತ್ತು ನಿನ್ನ ತಾರಾಪಟ್ಟಕ್ಕೆ. ನಾನು ಪ್ರೀತಿಸುತ್ತಿದ್ದ ಪ್ರಕಾಶ ನೀನಲ್ಲ ಬಿಡು. ಸಲೀಸಾಗಿ ನನ್ನ ವ್ಯಾಪಾರ ನಡೀತಾ ಇದೆ. ನೀನೇ ಕರೆದೊಯ್ತಾ ಇದೀಯ. ನಾಚಿಕೆಯಾಗಲ್ವಾ?" ಎಂದು ಬಿಕ್ಕಿದಳು. ಅವನ ಕಣ್ಣುಗಳೂ ನೀರಾಡಿದವು. ಮತ್ತೆ ಸಂತಾಪದಿಂದ, "ಎಷ್ಟು ಕಾದೆ ನಿನಗಾಗಿ ಗೊತ್ತಾ? ಏಕೆ ಬರಲಿಲ್ಲ? ನನ್ನ ಮೈ ಮನವೆಲ್ಲ ಉರಿದು ಬೂದಿಯಾದ ಮೇಲೆ ಬರ್ತಾ ಇದೀಯ" ಎಂದು ಅಂತರಂಗದ ಉರಿಯನ್ನೆಲ್ಲ ಹರಿಬಿಟ್ಟಳು. ಪ್ರಕಾಶ ಹಿಂದಿನ ಸೀಟಿಗೆ ಹೋಗಿ ಅವಳನ್ನು ತಬ್ಬಿ ಸಂತೈಸಿದ. ವರ್ಷಗಳ ಅಗಲಿಕೆ ಕೊನೆಯಾಗಿತ್ತು. ಅವಳು ನಾಗವೇಣಿಯಾಗಿದ್ದಳು.

ದುಃಖ ಕೊಂಚ ತಹಬಂದಿಗೆ ಬಂದ ನಂತರ, "ಒಂದು ಉಪಕಾರ ಮಾಡು ಪ್ರಕಾಶ. ಇಷ್ಟು ದಿನಗಳಲ್ಲಿ ನನಗಿಂಥ ಅವಕಾಶ ದೊರಕಿಲ್ಲ. ಸದಾ ಹಿಂದೆ ಮುಂದೆ ನಾಲ್ಕು ಜನರ ಕಾವಲಿನಲ್ಲೇ ಹೊರಡುತ್ತಿದ್ದ ಪಂಜರದ ಗಿಣಿ ನಾನು. ಕೈಯಲ್ಲಿ ಕಾಸೂ ಇಲ್ಲ. ದಿಕ್ಕು ದಸೆಯೂ ಇಲ್ಲ. ನನ್ನ ಬಗ್ಗೆ ತಿಳಿಯದ ದೂರ ಊರಿನಲ್ಲಿ ಒಂದು ಅನಾಥಾಶ್ರಮದಲ್ಲಿ ನನ್ನ ಬಿಟ್ಟು ಬಿಡು. ಅಥವಾ ಯಾವುದಾದರೊಂದು ಒಳ್ಳೆಯ ಕೆಲಸ ಕೊಡಿಸು. ಈ ಹಾಳು ಬದುಕು ಬೇಡ. ಬೆಳ್ಳಿ ಪರದೆಯ ಥಳಕು ಬಳಕು ನೋಡಿದ್ದೂ... ಅನುಭವಿಸಿದ್ದೂ ಸಾಕು" ಎಂದಳು. ಪ್ರಕಾಶ ಅವಳ ಕೈ ಹಿಡಿದುಕೊಂಡು, "ಈ ಮಾತೇ ನಿಜವಾಗಿದ್ದರೆ ಇಬ್ಬರೂ ದೂರ ಎಲ್ಲಿಯಾದರೂ ಹೋಗೋಣ. ಆದರೆ ಇಂಥ ಶ್ರೀಮಂತಿಕೆಯ ಜೀವನ ನನ್ನಿಂದ ಕೊಡಲು ಸಾಧ್ಯವಿಲ್ಲ ನಾಗು. ಬಡತನದಲ್ಲೇ ನೆಮ್ಮದಿಯಾಗಿರೋಣ" ಎಂದ. "ಬೇಡಾ ಪ್ರಕಾಶ. ನೀನು ಬೇರೆ ಒಳ್ಳೆಯ ಹುಡುಗಿಯನ್ನು ಮದುವೆಯಾಗಿ ಸುಖವಾಗಿರು. ನಾನು ಪತಿತೆ. ಮೈ ಮನವೆಲ್ಲ ಮೈಲಿಗೆಯಾಗಿ ಹೋಗಿದೆ. ನನ್ನಿಂದ ದೂರ ಹೋಗು" ಎನ್ನುತ್ತ ಕಾರಿನಿಂದಿಳಿದು ದೂರ ಓಡಿದಳು. ರೊಚ್ಚಿಗೆದ್ದವರಂತೆ... ಮನದ ನೋವೆಲ್ಲ ಕೊಚ್ಚಿ ಹೋಗುವಂತೆ... ಅವನೂ, "ಮನಕ್ಕೆ